## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮರಳು ಲಾರಿ ಮಾಲೀಕರ ಬೇಡಿಕೆಗಳ ಕುರಿತು.

*****

ಓದಲಾಗಿದೆ:

1) ಆಯುಕ್ತರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ಪತ್ರ ಸಂಖ್ಯೆ:ಡಿಎಂಜಿ/ಡಿಡಿ (ಎಂಎ)/ಮರಳು/2007-08/1548, ದಿನಾಂಕ:20-08-2007.

2) ದಿನಾಂಕ:21-08-2007 ಮತ್ತು 22-08-2007 ರಂದು ಮಾನ್ಯ ಸಾರಿಗೆ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

ಪ್ರಸ್ತಾವನೆ:

ಮರಳು ಸಾಗಾಣಿಕೆಯನ್ನು ಮಾಡಲು ಲಾರಿ ಮಾಲೀಕರುಗಳಿಗೆ ಪರವಾನಗಿ ನೀಡುವಂತೆ ಹಾಗೂ ಆರಕ್ಷಕ, ಕಂದಾಯ ಮತ್ತು ಸಾರಿಗೆ ಇಲಾಖೆಯ ಅಧಿಕಾರಿಗಳು ನೀಡುತ್ತಿರುವ ತೊಂದರೆ/ಕಿರುಕುಳವನ್ನು ತಪ್ಪಿಸುವಂತೆ ಹಾಗೂ ಇನ್ನಿತರೆ ಬೇಡಿಕೆಗಳನ್ನು ಈಡೇರಿಸುವಂತೆ ಫೆಡರೇಷನ್ ಆಫ್ ಕರ್ನಾಟಕ ಸ್ಟೇಟ್ ಲಾರಿ ಓನರ್ಸ್ ಅಂಡ್ ಏಜೆಂಟ್ಸ್ ಅಸೋಸಿಯೇಷನ್ಸ್ ರವರು ಮುಷ್ಕರವನ್ನು ಮಾಡುತ್ತಿದ್ದು, ಲಾರಿ ಮಾಲೀಕರುಗಳ ತೊಂದರೆ/ಸಮಸ್ಯೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಸದರಿ ಅಸೋಸಿಯೇಷನ್ ಪದಾಧಿಕಾರಿಗಳೊಂದಿಗೆ ಸುದೀರ್ಘವಾಗಿ ಚರ್ಚಿಸಲು ಹಲವಾರು ಸಭೆಗಳನ್ನು ಏರ್ಪಡಿಸಿದ್ದು, ಸದರಿ ಸಭೆಗಳಲ್ಲಿ ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಗಿರುತ್ತದೆಂದು ತಿಳಿಸುತ್ತಾ, ಅದರಂತೆ ಸೂಕ್ತ ಸರ್ಕಾರಿ ಆದೇಶವನ್ನು ಹೊರಡಿಸುವಂತೆ ಆಯುಕ್ತರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರು ಮೇಲೆ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

1) ಲಾರಿ ಮಾಲೀಕರುಗಳ ಕೋರಿಕೆಯ ಮೇರೆಗೆ, ಮರಳನ್ನು ಸಾಗಾಣಿಕೆ ಮಾಡಲು ಗುತ್ತಿಗೆದಾರರ ಹೆಸರು, ಪ್ರದೇಶ, ಸರ್ವೆ ನಂ. ಮತ್ತು ಗ್ರಾಮ ಇತ್ಯಾದಿಗಳ ಮಾಹಿತಿಗಳನ್ನೊಳಗೊಂಡಂತೆ ಹಾಗೂ ಯಾವ ಪ್ರದೇಶದಿಂದ ಯಾವ ಪ್ರದೇಶಕ್ಕೆ ಮರಳನ್ನು ಸಾಗಿಸಲಾಗುತ್ತದೆ ಎಂಬುದನ್ನು ನಮೂದಿಸಿ ನಿಗದಿತ ಶುಲ್ಕವನ್ನು ಪಾವತಿಸಿಕೊಂಡು ಪರವಾನಗಿಯನ್ನು ನೀಡುವುದು.

2) ಕೆ.ಎಂ.ಎಂ.ಸಿ. ನಿಯಮ 1994 ರ ನಿಯಮ 32 ರಡಿಯಲ್ಲಿ ಹಳೇ ಮೈಸೂರು ಪ್ರಾಂತ್ಯದ ಪ್ರದೇಶಗಳ ಪಟ್ಟಾದಾರರ ಜಮೀನುಗಳಲ್ಲಿ ಲಭ್ಯವಿರುವ ಮರಳನ್ನು ಸಾಗಿಸಲು ನಿಗದಿತ ಶುಲ್ಕ ಮತ್ತು ರಾಜಧನವನ್ನು ಪಾವತಿಸಿಕೊಂಡು ಅನುಮತಿಸುವುದು.

3) ಮರಳು ಗಣಿಗಾರಿಕೆಯನ್ನು ನಿಷೇಧಿಸಿರುವ ಪ್ರದೇಶಗಳಲ್ಲಿ ಹಾಗೂ ಕೃಷಿ ಜಮೀನಿನಲ್ಲಿ ಕೃಷಿ ಯೋಗ್ಯ ಮಣ್ಣಿನಿಂದ ಮರಳನ್ನು ಸಂಸ್ಕರಿಸುವುದನ್ನು ನಿರ್ಬಂಧಿಸಲು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಲು ಜಿಲ್ಲಾ ಉಸ್ತುವಾರಿ ಸಮಿತಿಗೆ ಸೂಚಿಸುವುದು.

ಅಂತೆಯೇ, ದಿನಾಂಕ:21-08-2007 ಮತ್ತು 22-08-2007 ರಂದು ಮಾನ್ಯ ಸಾರಿಗೆ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಗಳಲ್ಲಿ ಲಾರಿ ಮಾಲೀಕರುಗಳ ಬೇಡಿಕೆಗಳನ್ನು ಸುದೀರ್ಘವಾಗಿ ಚರ್ಚಿಸಿ, ತೀರ್ಮಾನವನ್ನು ತೆಗೆದುಕೊಂಡು ಸಭೆಯ ನಡವಳಿಗಳನ್ನು ಮೇಲೆ ಓದಲಾದ(2)ರಲ್ಲಿ ಹೊರಡಿಸಲಾಗಿದೆ.

ನಿರ್ದೇಶಕರ ಪ್ರಸ್ತಾವನೆಯನ್ನು ಹಾಗೂ ಮಾನ್ಯ ಸಾರಿಗೆ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಗಳ ನಡವಳಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಸಿಐ 66 ಎಂಎಂಐಎನ್ 2007**

**ಬೆಂಗಳೂರು, ದಿನಾಂಕ:24-08-2007**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಹಳೇ ಮೈಸೂರು ಪ್ರಾಂತ್ಯದ ಜಿಲ್ಲೆಗಳಾದಂತಹ ಮೈಸೂರು, ಮಂಡ್ಯ, ತುಮಕೂರು, ಹಾಸನ, ಚಾಮರಾಜನಗರ, ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಲಾರಿ ಮಾಲೀಕರುಗಳು ಮರಳು ಸಾಗಾಣಿಕೆಯನ್ನು ಮಾಡಲು, ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ, 1994 ರ ನಿಯಮ 56 ರ ಪ್ರಕಾರ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ ಸರ್ಕಾರವು ಅನುಮತಿ ನೀಡಿದೆ.

1) ಈ ಕೆಳಕಂಡ ಗುಂಪುಗಳಲ್ಲಿನ ಜಿಲ್ಲೆಗಳಲ್ಲಿ ಈಗಾಗಲೇ ಹರಾಜುಗೊಂಡಿರುವ ಮರಳು ಪ್ರದೇಶಗಳಿಂದ, ಅಧಿಕೃತ ಗುತ್ತಿಗೆದಾರರಿಂದ ಮರಳನ್ನು ಪಡೆದು ಸಾಗಿಸಲು ಗುತ್ತಿಗೆದಾರರ ಹೆಸರು, ಗುತ್ತಿಗೆದಾರರ ರಸೀದಿಯೊಂದಿಗೆ, ಪ್ರದೇಶ, ಸರ್ವೆ ನಂ. ಮತ್ತು ಗ್ರಾಮ ಇತ್ಯಾದಿಗಳನ್ನು ಹಾಗೂ ಯಾವ ಪ್ರದೇಶದಿಂದ ಯಾವ ಪ್ರದೇಶಕ್ಕೆ ಮರಳನ್ನು ಸಾಗಿಸಲಾಗುತ್ತದೆ, ಲಾರಿ ರಿಜಿಸ್ಟ್ರೇಷನ್ ಸಂಖ್ಯೆ ಮತ್ತು ಲಾರಿ ಮಾಲೀಕರ ಹೆಸರನ್ನು ನಮೂದಿಸಿ ನಿಗದಿತ ಶುಲ್ಕವನ್ನು ಪಾವತಿಸಿಕೊಂಡು, ಆ ಗುಂಪಿನಲ್ಲಿನ ಯಾವುದೊಂದು ಜಿಲ್ಲೆಯಿಂದಲೂ ಮರಳನ್ನು ಸಾಗಿಸಲು ಆ ಗುಂಪಿನಲ್ಲಿರುವ ಜಿಲ್ಲೆಗಳ ಹೆಸರನ್ನು ನಮೂದಿಸಿ, ಆ ಗುಂಪಿನಲ್ಲಿನ ಯಾವುದೊಂದು ಜಿಲ್ಲೆಯ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಸಕ್ಷಮ ಪ್ರಾಧಿಕಾರವು ಮರಳನ್ನು ಸಾಗಿಸಲು ಪರವಾನಗಿಯನ್ನು ನೀಡುವುದು.

<u>ಗುಂಪು - 1:</u> ತುಮಕೂರು, ಕೋಲಾರ, ಮಂಡ್ಯ, ಬೆಂಗಳೂರು ಗ್ರಾಮಾಂತರ, ರಾಮನಗರ ಮತ್ತು ಚಿಕ್ಕಬಳ್ಳಾಪುರ

<u>ಗುಂಪು - 2 :</u> ಮಂಡ್ಯ, ಚಾಮರಾಜನಗರ, ಮೈಸೂರು, ಹಾಸನ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ

2. ಯಾವ ಗುಂಪಿನಲ್ಲಿ ಪರವಾನಗಿಯನ್ನು ಪಡೆಯಲಾಗಿದೆಯೋ, ಆಯಾ ಗುಂಪಿನ ಜಿಲ್ಲೆಯಲ್ಲಿ ಹರಾಜುಗೊಂಡಿರುವ ಮರಳು ಪ್ರದೇಶದಿಂದ ಮಾತ್ರ ಮರಳನ್ನು ಸಾಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಗುಂಪನ್ನು ಬದಲಾಯಿಸತಕ್ಕದ್ದಲ್ಲ.

3. ಒಂದು ಲಾರಿಗೆ ಒಂದು ಪರವಾನಗಿಯಂತೆ, ಲಾರಿ ಸಂಖ್ಯೆಯನ್ನು ನಮೂದಿಸಿ ಪರವಾನಗಿ ವಿತರಿಸುವುದು.

4. ಕೆ.ಎಂ.ಎಂ.ಸಿ. ನಿಯಮ 1994 ರ ನಿಯಮ 32 ಅಡಿಯಲ್ಲಿ ಹಳೇ ಮೈಸೂರು ಪ್ರಾಂತ್ಯದ ಪ್ರದೇಶಗಳ ಪಟ್ಟಾದಾರರ ಜಮೀನುಗಳಲ್ಲಿ ಲಭ್ಯವಿರುವ ಮರಳನ್ನು ಸಾಗಿಸಲು ಸಂಬಂಧಪಟ್ಟ ಪಟ್ಟಾದಾರರು ಜಿಲ್ಲೆಯ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಸಕ್ಷಮ ಪ್ರಾಧಿಕಾರದಲ್ಲಿ ತಮ್ಮ ಹೆಸರನ್ನು ವಿವರಗಳೊಂದಿಗೆ ನೋಂದಾಯಿಸಿಕೊಳ್ಳತಕ್ಕದ್ದು. ಈ ರೀತಿ ನೋಂದಾಯಿಸಿಕೊಂಡಂತಹ ಪಟ್ಟಾದಾರರಿಗೆ ಮಾತ್ರ ನಿಗದಿತ ಶುಲ್ಕ ಮತ್ತು ರಾಜಧನವನ್ನು ಪಾವತಿಸಿಕೊಂಡು, ಪಟ್ಟಾದಾರರ ಹೆಸರಿನಲ್ಲಿ ಮೇಲೆ ತಿಳಿಸಿದ ಗುಂಪುಗಳ ವಿಂಗಡನೆ, ನಿರ್ದೇಶನದನ್ವಯ ಹಾಗೂ ಷರತ್ತಿಗೊಳಪಟ್ಟಂತೆ ಪರವಾನಗಿಯನ್ನು ನೀಡುವುದು (ಭೂಮಂಜೂರಾತಿ ಜಮೀನುಗಳನ್ನು ಹೊರತುಪಡಿಸಿ).

5. ಮರಳು ಗಣಿಗಾರಿಕೆಯನ್ನು ನಿಷೇಧಿಸಿರುವ ಪ್ರದೇಶಗಳಲ್ಲಿ ಮರಳು ಗಣಿಗಾರಿಕೆ/ ಸಾಗಾಣಿಕೆಯನ್ನು ನಿಯಂತ್ರಿಸಲು ಜಿಲ್ಲಾ ಉಸ್ತುವಾರಿ ಸಮಿತಿಯು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದು ಕೊಳ್ಳತಕ್ಕದ್ದು ಹಾಗೂ ಸ್ಥಾನಿಕ ಸಮಸ್ಯೆಗಳನ್ನು ಪರಿಗಣಿಸಿ, ಈ ರೀತಿ ವಿಧಿಸಿರುವ ನಿಷೇಧವನ್ನು ಸಡಿಲಿಸುವ ಬಗ್ಗೆ ಜಿಲ್ಲಾ ಉಸ್ತುವಾರಿ ಸಮಿತಿಯು ನಿಯಮಗಳಡಿಯಲ್ಲಿ ಪರಿಶೀಲಿಸಿ, ಸೂಕ್ತ ನಿರ್ಣಯ ತೆಗೆದುಕೊಳ್ಳತಕ್ಕದ್ದು.

6. ಕೃಷಿ ಜಮೀನಿನಲ್ಲಿ ಕೃಷಿ ಯೋಗ್ಯ ಮಣ್ಣಿನಿಂದ ಮರಳನ್ನು ಸಂಸ್ಕರಿಸುವುದನ್ನು ನಿರ್ಬಂಧಿಸಲು/ ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಲು ಹಾಗೂ ಈಗಾಗಲೇ ಅಧಿಸೂಚನೆಗೊಂಡ ಮರಳು ನಿಕ್ಷೇಪಗಳ ಪ್ರದೇಶಗಳನ್ನು ತ್ವರಿತವಾಗಿ ಹರಾಜಿನ ಮೂಲಕ ವಿಲೇ ಮಾಡಲು ಜಿಲ್ಲಾ ಉಸ್ತುವಾರಿ ಸಮಿತಿಗೆ ಸೂಚಿಸಿದೆ.

7. ಲಾರಿ ಮಾಲೀಕರುಗಳ ಸಂಘದವರು ಒಪ್ಪಿಕೊಂಡಿರುವಂತೆ, ಮರಳನ್ನು ವಾಹನ ಬಾಡಿ ಮಟ್ಟಕ್ಕಿಂತ (Body level) ಹೆಚ್ಚಿಗೆ ಭರ್ತಿ ಮಾಡತಕ್ಕದ್ದಲ್ಲ ಹಾಗೂ ನಿಗದಿತ ತೂಕಕ್ಕಿಂತ ಹೆಚ್ಚಿನ ಭಾರವನ್ನು (overloading) ಹೊರಿಸ ತಕ್ಕದ್ದಲ್ಲ.

8. ಮರಳು ಗಣಿಗಾರಿಕೆಯನ್ನು ನಿಷೇಧಿಸಿರುವ ಪ್ರದೇಶ/ಜಿಲ್ಲೆಗಳಿಂದ ಮರಳನ್ನು ಸಾಗಾಣಿಕೆ ಮಾಡತಕ್ಕದ್ದಲ್ಲ.

9. ಕ್ರ.ಸಂ.1 ಮತ್ತು 4 ರಲ್ಲಿ ನೀಡಲಾಗುವ ಪರವಾನಗಿಯು ಗರಿಷ್ಠ 7 ದಿನಗಳ ಅವಧಿಯನ್ನು ಮೀರತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ಎಸ್. ಪಟ್ಟಣಶೆಟ್ಟಿ)
ಸರ್ಕಾರದ ಅಪರ ಕಾರ್ಯದರ್ಶಿ(ಗಣಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.
2-4/8/07

**ಇವರಿಗೆ:**

1) ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ನಂ.49, ಖನಿಜ ಭವನ, ಡಿ. ದೇವರಾಜ ಅರಸು ರಸ್ತೆ, ಬೆಂಗಳೂರು-01.
2) ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಉಸ್ತುವಾರಿ ಸಮಿತಿ.
3) ಡಿ.ಜಿ. ಮತ್ತು ಐ.ಜಿ.ಪಿ, ನೃಪತುಂಗ ರಸ್ತೆ, ಬೆಂಗಳೂರು.
4) ಪೋಲಿಸ್ ಆಯುಕ್ತರು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
5) ಪೋಲಿಸ್ ಆಯುಕ್ತರು, ಮೈಸೂರು ಜಿಲ್ಲೆ, ಮೈಸೂರು.
6) ಎಲ್ಲಾ ಜಿಲ್ಲೆಯ ಸೂಪರಿಂಟೆಂಡೆಂಟ್ ಆಫ್ ಪೋಲೀಸ್,
7) ಸಾರಿಗೆ ಆಯುಕ್ತರು, ಬಹುಮಹಡಿಕಟ್ಟಡ, ಬೆಂಗಳೂರು.
8) ಎಲ್ಲಾ ಜಿಲ್ಲೆಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು,
9) ಎಲ್ಲಾ ಜಿಲ್ಲೆಯ ಉಪನಿರ್ದೇಶಕರು/ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ,
10) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ,
11) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಾರಿಗೆ ಇಲಾಖೆ,
12) ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
13) ಮಾನ್ಯ ಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.